**ಸಾಕ್ಷಿಯನ್ನು ದಿಃ 04.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ.ಎ.ಎಸ್ ವಕೀಲರಿಂದಃ**

ನಾನು ಕೆಎ-09-ಇಜಿ-8258 ವಾಹನದ ಹಿಂಭಾಗದಲ್ಲಿ ಕುಳಿತುಕೊಂಡು ಹೋಗುತ್ತಿದ್ದೆ ಎಂದರೆ ಸರಿ. ನನ್ನ ಸ್ನೇಹಿತ ನಾಗೇಂದ್ರ ಎದುರುಗಡೆ ವಾಹನಕ್ಕೆ ಹೋಗಿ ಡಿಕ್ಕಿ ಪಡಿಸಿದ್ದಾರೆ ಎಂದರೆ ಸರಿ. ನನಗೆ 55 ವರ್ಷ ವಯಸ್ಸು. ಅಪಘಾತ ಎದುರುಗಡೆ ವಾಹನದ ಚಾಲಕನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಿಂಬದಿ ಸವಾರ ಆದ ಕಾರಣ ನನಗೆ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನಗೆ ಪರಿಹಾರ ಬರುವುದಿಲ್ಲ ಎಂಬ ಉದ್ದೇಶದಿಂದ ಎದುರುದಾರರ ವಾಹನದ ಮೇಲೆ ನಾನು ಸುಳ್ಳು ಅರ್ಜಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನಂತರ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿರುತ್ತೇನೆ ಎಂದರೆ ಸರಿ. ನನಗೆ ಚಿಕಿತ್ಸೆ ನೀಡಿದ ವೈಧ್ಯರು ಡಾ. ವಾಸನ್. ಅಪಘಾತದ ಸಂದರ್ಬದಲ್ಲಿ ಹೆಲ್ಮೆಟ್ ಹಾಕದೆ ಇದ್ದ ಕಾರಣ ತಲೆಗೆ ಪೆಟ್ಟಾಗಿದೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಔಷಧಿ ಬಿಲ್ಲುಗಳನ್ನು ಸೃಷ್ಠಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರ ವಾಹನ ಚಾಲಕನಿಗೆ ಅಪಘಾತ ಸಮಯದಲ್ಲಿ ಡಿ.ಎಲ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಚಿಕಿತ್ಸೆ ನೀಡಿ ಗುಣಮುಖನಾದ ನಂತರ ಬಿಡುಗಡೆ ಗೊಳಿಸಿದ್ದಾರೆ ಎಂದರೆ ಸರಿ. ಅಪಘಾತ ಎದುರುದಾರರ ತಪ್ಪಿನಿಂದ ಆಗದೇ ಇರುವ ಕಾರಣ ಎದುರುದಾರರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ನನ್ನ ಮಕ್ಕಳು ನನ್ನನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನಾನು ಯಾವುದೇ ಕೆಲಸ ಮಾಡಿ ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಅಪಘಾತದ ಮೊದಲು ಸಂಪಾದನೆ ಮಾಡುತ್ತಿದ್ದೆ ಈಗ ಇಲ್ಲ ಎನ್ನುತ್ತಾರೆ. ನಾನು ವೃತ್ತಿ ಹಾಗೂ ವರಮಾನದ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕುಟುಂಬವನ್ನು ನನ್ನ ಮಕ್ಕಳೇ ನೋಡಿಕೊಳ್ಳುತಿದ್ದಾರೆ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.